## ಕವಿತೆ



ಎಚ್.ಸಿ. ಭವ್ಯ ನವೀನ

ಕಲೆ: ಅಕ್ಷಯ ಹೆಗಡೆ ಜಾಲಿಮನೆ



# ಆತ್ಮಲಿಂಗದ ಗುಹೆ

ಗುಹೆಯೊಳಗೆ
ಕತ್ತಲಿರಬೇಕು
ಬಿರು ಬೆಳಕಿದ್ದರೆ ಅದು ಗುಹೆಯಲ್ಲ

ಗುಹೆಯೊಳಗೆ
ನಿಶ್ಶಬ್ದವಿರಬೇಕು
ಸದ್ದಾದರೆ ಅದು ಗುಹೆಯಲ್ಲ

ಗುಹೆಯೊಳಗೆ
ಗೌಪ್ಯವಿರಬೇಕು
ಗುಟ್ಟಲ್ಲದಿದ್ದರೆ ಅದು ಗುಹೆಯಲ್ಲ

ಗುಹೆಯೊಳಗೆ
ಇಳಿಯುವುದಷ್ಟೇ...
ಇಣುಕುವಂತಿದ್ದರೆ ಅದು ಗುಹೆಯಲ್ಲ

ಗುಹೆಯೊಳಗೆ
ಬಾಗಿಲಿಲ್ಲ, ಅಗುಳಿಯ
ಭಯವಿಲ್ಲದಿದ್ದರೆ ಅದು ಗುಹೆಯಲ್ಲ

ಗುಹೆಯೊಳಗೆ
ಧ್ಯಾನವಿರಬೇಕು
ಸುಖ ಧ್ಯಾನಿಸಿದರೆ ಅದು ಗುಹೆಯಲ್ಲ

ಗುಹೆಯೊಳಗೆ
ತೇವದ ಕಣ್ಣಿನ ಬಿಗಿಯಿರಬೇಕು
ಇಲ್ಲದಿದ್ದರೆ ಅದು ಗುಹೆಯಲ್ಲ

ಗುಹೆಯು ಕಾಲಗರ್ಭದ ಆದಿ
ಹಾದು ಹೋಗುವ ಹಾದಿಯ
ಬಯಲಾಗಿಸುವಂತಿಲ್ಲ
ಬಯಲಾದರೆ ಅದು ಕಾಲವಲ್ಲ, ಗರ್ಭವಲ್ಲ
ಗುಹೆಯಲ್ಲ...
ಅವನಾತ್ಮ... ಇವಳಾತ್ಮ ಕೂಡಿ
ಲಿಂಗವಾಗುವ ಗುಹೆಯೊಳಗೆ...!